


ದಸರೆಯ ಸಾಂಸ್ಕೃತಿಕ ಕಾರ್ಯಕ್ರಮದ ವೈಭವ



ಮೈಸೂರಿನಲ್ಲಿ ಕುಸ್ತಿಯ ಸೊಬಗು

ಇದನ್ನು ಆರಂಭಿಸಿದ್ದು ಅಂದಿನ ಮುಖ್ಯಮಂತ್ರಿ ದೇವರಾಜ ಅರಸು. ದಸರೆಗೆ ಸರ್ಕಾರದಿಂದ ಅನುದಾನ ನೀಡಲು ಶುರು ಮಾಡಿದರು. ಇದು, ಕಲಾವಿದರಿಗೆ ವೇದಿಕೆ ಒದಗಿಸುವ, ಕ್ರೀಡಾಪಟುಗಳ ಸಾಮರ್ಥ್ಯ ತೋರಿಸುವ ವೇದಿಕೆಯಾಗಿಯೂ ಪರಿಣಮಿಸಿತು. ಶಕ್ತಿ ದೇವತೆಯ ಆರಾಧನೆ ಜೊತೆಗೆ ಸಂಸ್ಕೃತಿಯ ದರ್ಶನ ಮಾಡಿಸಲಾಯಿತು. ಜೊತೆಗೆ ಪ್ರವಾಸೋದ್ಯಮಕ್ಕೆ ಶಕ್ತಿ ತುಂಬಿ, ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ಅದೆಷ್ಟೋ ಜನರ ಹೊಟ್ಟೆ ತುಂಬಿಸುತ್ತಿದೆ.

## ನಿಂತ ನೀರಾದ ಪ್ರವಾಸೋದ್ಯಮ!

ರಾಜ್ಯದಲ್ಲೇ ಪ್ರವಾಸೋದ್ಯಮ ವಿಚಾರದಲ್ಲಿ ಮೈಸೂರು ಮುಂಚೂಣಿಯಲ್ಲಿದೆ. ಪ್ರತಿ ವರ್ಷ 30ರಿಂದ 40 ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಾರೆ. ಆದರೆ, ಅದನ್ನು ಸರಿಯಾಗಿ ಶೋಕೇಸ್ ಮಾಡಲು ಸಾಧ್ಯವಾಗಿಲ್ಲ. ಹತ್ತಾರು ವರ್ಷಗಳ ಹಿಂದೆ ಹೇಗಿತ್ತು ಹಾಗೆಯೇ ಇದೆ. ಮೈಸೂರು ನಗರಿಯನ್ನು ಮಾದರಿ ಪ್ರವಾಸಿ